ನಿಮ್ಮೊಡನೆ

# ಮಕ್ಕಳಲ್ಲಿ ಹೆಚ್ಚುತ್ತಿರುವ ಡಿಜಿಟಲ್ ವ್ಯಸನ ಕಿರಿಯರೊಂದಿಗೆ ಹಿರಿಯರಿಗೂ ಬೇಕು ಎಚ್ಚರ

ಸಾಮಾಜಿಕ ಜಾಲತಾಣಗಳನ್ನು ಬಳಸುವುದಕ್ಕೆ ಇರುವ ನಿರ್ಬಂಧಗಳನ್ನು ನಿರ್ಲಕ್ಷಿಸಿ, ಎಳೆಯ ತಲೆಮಾರು ಡಿಜಿಟಲ್ ಜಗತ್ತಿನಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಿರುವುದು ಕಳವಳ ಹುಟ್ಟಿಸುವ ಸಂಗತಿ. ಸಾಮಾಜಿಕ ಜಾಲತಾಣಗಳ ಬಳಕೆ ಮುಖ್ಯವಾಗಿ ಎರಡು ರೀತಿಯಲ್ಲಿ ಮಕ್ಕಳಿಗೆ ಅಪಾಯಕಾರಿಯಾಗಬಲ್ಲದು. ಒಂದು, ಸಾಮಾಜಿಕ ಜಾಲತಾಣಗಳ ಬಳಕೆ ಎಳೆಯರನ್ನು ತಪ್ಪುದಾರಿಗೆಳೆಯಬಹುದು, ಅದರ ಪರಿಣಾಮ ವೈಯಕ್ತಿಕವಾಗಿ ಮಾತ್ರವಲ್ಲದೆ ಇತರೆ ಮಕ್ಕಳ ಮೇಲೂ ಆಗಬಹುದು. ಎರಡನೆಯ ಅಪಾಯ, ಸಾಮಾಜಿಕ ಜಾಲತಾಣಗಳಲ್ಲಿ ತೊಡಗಿಕೊಂಡಿರುವ ಎಳೆಯರು ಕೆಲವು ಅವಕಾಶವಾದಿಗಳ ಶೋಷಣೆಗೆ ಒಳಗಾಗುವ ಸಾಧ್ಯತೆಗೆ ಸಂಬಂಧಿಸಿದ್ದು. ಈ ಅಪಾಯಗಳನ್ನು ಅರಿತೇ ಮಕ್ಕಳನ್ನು ಸಾಮಾಜಿಕ ಜಾಲತಾಣಗಳಿಂದ ದೂರವಿರಿಸುವ ಅಭಿಯಾನವೊಂದು ಕರ್ನಾಟಕದ ಹಲವು ಶಾಲೆಗಳಲ್ಲಿ ನಡೆದಿದೆ. ಆನ್‌ಲೈನ್ ಬಳಕೆಯ ಕುರಿತು ವಹಿಸಬೇಕಾದ ಮುನ್ನೆಚ್ಚರಿಕೆಗಳ ಬಗ್ಗೆ ಪೋಷಕರೊಂದಿಗೆ ಚರ್ಚೆಗಳು ನಡೆದಿವೆ.

ಕಲಿಕೆಯ ಸಂದರ್ಭದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ತೊಡಗಿಕೊಳ್ಳುವುದರಿಂದ ವೈಯಕ್ತಿಕ ತೊಂದರೆಗಳು ಮಾತ್ರವಲ್ಲ, ಸಾರ್ವತ್ರಿಕ ನೆಲೆಯಲ್ಲೂ ಸಮಸ್ಯೆಗಳು ಉಂಟಾಗುವುದನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಕೊಡುವ ಪ್ರಯತ್ನಗಳು ಶಾಲಾಮಟ್ಟದಲ್ಲಿ ನಡೆದಿವೆ. ಇತ್ತೀಚೆಗೆ, ಒಂಬತ್ತನೇ ತರಗತಿಯ ವಿದ್ಯಾರ್ಥಿನಿಯೊಬ್ಬಳ ಫೋಟೊವನ್ನು ‘ಎಐ’ ತಂತ್ರಜ್ಞಾನ ಬಳಸಿ ವಿಕೃತಗೊಳಿಸಲಾಗಿತ್ತು. ಗುಂಪು ಹರಟೆಗೆ, ಶಿಕ್ಷಕರನ್ನು ಲೇವಡಿ ಮಾಡಲು ವಿದ್ಯಾರ್ಥಿಗಳ ನಡುವೆ ಇನ್‌ಸ್ಟಾಗ್ರಾಂ ಜನಪ್ರಿಯವಾಗಿದೆ. ಇಂಥ ವಿದ್ಯಮಾನಗಳನ್ನು ಗಮನಿಸಿ, ಮಕ್ಕಳ ಡಿಜಿಟಲ್ ಚಟುವಟಿಕೆಗಳ ಬಗ್ಗೆ ಶಾಲೆಗಳು– ವಿಶೇಷವಾಗಿ ಬೆಂಗಳೂರಿನಲ್ಲಿನ ಶಾಲೆಗಳು– ಎಚ್ಚೆತ್ತುಕೊಂಡಿವೆ. ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಣಗಳನ್ನು ಬಳಸುವುದರಿಂದ ಉಂಟಾಗಬಹುದಾದ ಅಪಾಯಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳು ನಡೆದಿವೆ. ಮಕ್ಕಳನ್ನು ಡಿಜಿಟಲ್ ಲೋಕದಿಂದ ಆದಷ್ಟೂ ದೂರವಿಡುವ ಅಗತ್ಯದ ಬಗ್ಗೆ ಪೋಷಕರನ್ನು ಜಾಗೃತಗೊಳಿಸುವ ಪ್ರಯತ್ನಗಳೂ ನಡೆದಿವೆ. ಇಂಥ ಪ್ರಯತ್ನಗಳೂ ವ್ಯಾಪಕವಾಗಬೇಕು; ಹಳ್ಳಿಗಳಲ್ಲೂ ಸರ್ಕಾರಿ ಶಾಲೆಗಳಲ್ಲೂ ನಡೆಯಬೇಕು.

ಡಿಜಿಟಲ್ ಸಲಕರಣೆಗಳ ಅನಿಯಂತ್ರಿತ ಬಳಕೆ ಮಕ್ಕಳ ಮೇಲೆ ಉಂಟು ಮಾಡುವ ಪರಿಣಾಮಗಳು ಒಂದೆರಡಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಮುಳುಗಿರುವ ಮಕ್ಕಳಿಗೆ ಕೌಟುಂಬಿಕ ಹಾಗೂ ಸಾಮಾಜಿಕ ಸಂಬಂಧಗಳು ಗೌಣವೆನ್ನಿಸಬಹುದು. ಡಿಜಿಟಲ್ ಸಲಕರಣೆಗಳ ಸಖ್ಯ ಉಂಟು ಮಾಡುವ ದೈಹಿಕ ಹಾಗೂ ಮಾನಸಿಕ ದಣಿವಿನ ನೇರ ಪರಿಣಾಮ ಕಲಿಕೆಯ ಮೇಲಾಗುತ್ತದೆ; ಮಕ್ಕಳಲ್ಲಿ ಕಾಣಿಸಿಕೊಳ್ಳುವ ಖಿನ್ನತೆ, ಕೆರಳುವಿಕೆಯಂತಹ ವರ್ತನೆಗಳಿಗೂ ಕಾರಣವಾಗಬಹುದು. ಡಿಜಿಟಲ್ ಪರದೆಗಳನ್ನು ದೀರ್ಘ ಕಾಲ ನೋಡುವುದರಿಂದ ಎಳೆಯ ಕಣ್ಣುಗಳ ಆರ್ದ್ರತೆ ಗಾಸಿಗೊಳ್ಳುವ ಸಾಧ್ಯತೆಯಿದೆ. ಮಕ್ಕಳ ಬಾಲ್ಯ ಹಾಗೂ ಶಿಕ್ಷಣ ವಿಕಸನಗೊಳ್ಳಬೇಕಾದುದು ಶಾಲೆ ಹಾಗೂ ಸಾಮಾಜಿಕ ನಂಟುಗಳ ಪರಿಸರದಲ್ಲೇ ಹೊರತು, ಮೊಬೈಲ್–ಟ್ಯಾಬ್‌ಗಳ ನಂಟಿನ ಮೂಲಕವಲ್ಲ.

ಸಮಾಜದ ವೈವಿಧ್ಯವನ್ನು ಅರಿಯುವ ಮೂಲಕ ಸಂಘಜೀವಿಗಳಾಗುವಂತೆ ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವುದು ಶಿಕ್ಷಣದ ಪ್ರಮುಖ ಉದ್ದೇಶಗಳಲ್ಲೊಂದಾಗಿದೆ. ಈ ಉದ್ದೇಶ ಸಾರ್ಥಕಗೊಳ್ಳಬೇಕಾದರೆ, ತರಗತಿಯ ಚೌಕಟ್ಟು ಹಾಗೂ ಕೌಟುಂಬಿಕ ಪರಿಸರ ಆರೋಗ್ಯಕರವಾಗಿರುವುದು ಮುಖ್ಯ. ದುರದೃಷ್ಟವಶಾತ್, ಇತ್ತೀಚಿನ ವರ್ಷಗಳಲ್ಲಿ ‘ಡಿಜಿಟಲ್ ಮಾಲಿನ್ಯ’ ಮನೆಗಳನ್ನು ಆವರಿಸಿಕೊಂಡಿದೆ, ಶಿಕ್ಷಣಕ್ಷೇತ್ರದಲ್ಲೂ ಕಾಣಿಸಿಕೊಂಡಿದೆ. ಕೊರೊನಾ ಸಂದರ್ಭದಲ್ಲಿ ಅನಿವಾರ್ಯವಾಗಿದ್ದ ಆನ್‌ಲೈನ್ ಶಿಕ್ಷಣ, ಈಗಲೂ ಬೇರೆ ಬೇರೆ ಕಾರಣಗಳಿಂದಾಗಿ ಚಾಲ್ತಿಯಲ್ಲಿದೆ. ಆನ್‌ಲೈನ್ ಟ್ಯೂಷನ್ ಸೆಂಟರ್‌ಗಳೂ ಹುಟ್ಟಿಕೊಂಡಿವೆ. ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ಅನೇಕ ಪೋಷಕರು ತಮ್ಮ ಮಕ್ಕಳ ಕೈಗೆ ಮೊಬೈಲ್–ಟ್ಯಾಬ್ ಕೊಟ್ಟಿದ್ದಾರೆ. ಈಗ ಮಕ್ಕಳನ್ನು ಡಿಜಿಟಲ್ ಪರದೆಗಳಿಂದ ಬಯಲಿಗೆ ಕರೆತರಬೇಕಾದ ಹೊಣೆಗಾರಿಕೆ ಪೋಷಕರದೂ ಶಿಕ್ಷಕರದೂ ಆಗಿದೆ.

ಡಿಜಿಟಲ್ ಪರದೆಯಾಚೆಗೆ ಮಕ್ಕಳನ್ನು ಕರೆತರಲು ನಡೆಯುತ್ತಿರುವ ಪ್ರಯತ್ನಗಳು ಸ್ವಾಗತಾರ್ಹ. ಪ್ರಾಕೃತಿಕ ಗಾಳಿಬೆಳಕಿಗೆ ಮೈಮನಗಳನ್ನು ಒಡ್ಡಿಕೊಂಡು ಬಯಲಿನಲ್ಲಿ ಆಡುವ ಸುಖ ಎಲ್ಲ ಕಾಲದ ಮಕ್ಕಳಿಗೂ ಅಗತ್ಯವಾಗಿ ಬೇಕಾದುದು. ದೈಹಿಕ ಹಾಗೂ ಮಾನಸಿಕ ವಿಕಾಸಕ್ಕೆ ಪೂರಕವಾದ ‘ಬಯಲ ನಂಟು’ ಯಾವ ಕಾರಣದಿಂದಲೂ ಕಡಿದುಹೋಗಬಾರದು. ಎಳೆಯರ ಬಾಲ್ಯದ ಬಣ್ಣಗಳನ್ನು ಕಸಿದುಕೊಳ್ಳುವ ಹಕ್ಕು ಶಿಕ್ಷಣ ವ್ಯವಸ್ಥೆಗೂ ಇಲ್ಲ, ಪೋಷಕರಿಗೂ ಇಲ್ಲ.

ಡಿಜಿಟಲ್ ವ್ಯಸನದಿಂದ ಮಕ್ಕಳನ್ನು ದೂರವಿಡುವ ನಿಟ್ಟಿನಲ್ಲಿ ಪೋಷಕರ ಕಾಳಜಿ ಮಹತ್ವವಾದುದು. ಬಹುತೇಕ ಸಂದರ್ಭಗಳಲ್ಲಿ ಕುಟುಂಬದ ಹಿರಿಯ ಸದಸ್ಯರೇ ಕಿರಿಯರ ಡಿಜಿಟಲ್ ಸಖ್ಯಕ್ಕೆ ಪ್ರೇರಣೆಯಾಗಿರುತ್ತಾರೆ. ಆ ಕಾರಣದಿಂದಾಗಿ, ಕಿರಿಯರೊಂದಿಗೆ ಒಡನಾಡುವ ಸಂದರ್ಭದಲ್ಲಾದರೂ ಹಿರಿಯರು ಮೊಬೈಲ್ ಫೋನ್‌ಗಳಿಂದ ಅಂತರ ಕಾಯ್ದುಕೊಳ್ಳಬೇಕಾಗಿದೆ. ಆರೋಗ್ಯಕ್ಕೂ ಜೀವನಶೈಲಿಗೂ ಸಂಬಂಧವಿದೆ. ಉತ್ತಮ ಜೀವನಶೈಲಿಯಲ್ಲಿ ಆಹಾರಪಥ್ಯದ ಜೊತೆಗೆ ‘ಡಿಜಿಟಲ್ ಪಥ್ಯ’ ಸೇರ್ಪಡೆ ಆಗಬೇಕಾಗಿರುವುದು ಇಂದಿನ ಅಗತ್ಯ.

■ ರಘುನಾಥ ಚ.ಹ.

ಸಮಾಜದ ವೈವಿಧ್ಯವನ್ನು ಅರಿಯುವ ಮೂಲಕ ಸಂಘಜೀವಿಗಳಾಗುವಂತೆ ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವುದು ಶಿಕ್ಷಣದ ಪ್ರಮುಖ ಉದ್ದೇಶಗಳಲ್ಲೊಂದಾಗಿದೆ. ಈ ಉದ್ದೇಶ ಸಾರ್ಥಕಗೊಳ್ಳಬೇಕಾದರೆ, ತರಗತಿಯ ಚೌಕಟ್ಟು ಹಾಗೂ ಕೌಟುಂಬಿಕ ಪರಿಸರ ಆರೋಗ್ಯಕರವಾಗಿರುವುದು ಮುಖ್ಯ.


ಈಶ್ವರ್